# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಜರಾಜೇಶ್ವರಿ ನಗರ ವಲಯ.

"ವಾರ್ಡ್ ಕಮಿಟಿ - ವಾರ್ಡ್ ನಂ.72, ಯೋಗಭವನ, ಬಿ.ಇ.ಎಲ್.ಲೇಔಟ್, 1ನೇ ಹಂತ, ಭಾರತ್‌ನಗರ"

---

ಸಂಖ್ಯೆ:ಬೃಬೆಂಮಪಾ/ರಾರಾವ/ವಾರ್ಡ್ ನಂ.72/DETER/02/2021-22. ದಿನಾಂಕ: 12-05-2021.

ವಿಷಯ: ವಾರ್ಡ್ ನಂ.72. "ಹೇರೋಹಳ್ಳಿ" ವಾರ್ಡ್ ಸಭೆಯ ನಡವಳಿ.

ಉಲ್ಲೇಖ: 1. ಸಭಾ ಸೂಚನಾ ಪತ್ರ ಬಿಬಿಎಂಪಿ/ರಾರಾವ/2021-22, ದಿನಾಂಕ:10-05-2021.

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020, ದಿನಾಂಕ:07-05-2021.

<<>>

ಉಲ್ಲೇಖ(1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ(2)ರ ಆದೇಶದ ಅಂಶಗಳನ್ನು ಪರಿಶೀಲಿಸಲು **ದಿನಾಂಕ:11-05-2021ರಂದು ಹೇರೋಹಳ್ಳಿ, ವಾರ್ಡ್ ಸಂಖ್ಯೆ:72,** ಯೋಗಭವನ, ಬಿ.ಇ.ಎಲ್.ಲೇಔಟ್, 1ನೇ ಹಂತ, ಭಾರತ್‌ನಗರದಲ್ಲಿ **ವಾರ್ಡ್ ಸಮಿತಿ ಸಭೆಯನ್ನು ಬೆಳಗ್ಗೆ 11.00 ಗಂಟೆಗೆ ಕರೆಯಲಾಗಿದ್ದು**, ಸದರಿ ಸಭೆಯ ನಡವಳಿಗಳು.

## ಹಾಜರಿದ್ದವರು

1. ಶ್ರೀ ಎಸ್.ಆರ್.ಪ್ರಕಾಶ್, ಕಂದಾಯ ಅಧಿಕಾರಿ, ದಾಸರಹಳ್ಳಿ ವಲಯ. ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.72ರ ವಾರ್ಡ್ ಕಮಿಟಿ.
2. ಶ್ರೀ ಶ್ರೀನಿವಾಸಯ್ಯ, ಸಹಾಯಕ ಕಂದಾಯ ಅಧಿಕಾರಿ ಹಾಗೂ ಕಂದಾಯ ಇಲಾಖೆಯ ನೌಕರರು, ಹೇರೋಹಳ್ಳಿ ಉಪ ವಿಭಾಗ.
3. ಡಾ. ವಿವೇಕ್, ಆರೋಗ್ಯ ವೈದ್ಯಾಧಿಕಾರಿ (ಯಶವಂತಪುರ)
4. ಶ್ರೀ ಚಿತ್ತಯ್ಯ, ಸಹಾಯಕ ಅಭಿಯಂತರರು, ವಾರ್ಡ್ ನಂ.72, ಹೇರೋಹಳ್ಳಿ ಹಾಗೂ ಸದಸ್ಯರು ಕಾರ್ಯದರ್ಶಿ ವಾರ್ಡ್ ಕಮಿಟಿ.
5. ಶ್ರೀ ಹನುಮಂತರಾಜು, ಹಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.72)
6. ಶ್ರೀ ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.72)
7. ಶ್ರೀ ಶ್ರೀನಿವಾಸ್, ಸಿ.ಆರ್.ಪಿ,.
8. ಶ್ರೀ ಜಯಸ್ವಾಮಿ, ವಿ.ವಿ. ಬಡಾವಣೆ, 8ನೇ ಬ್ಲಾಕ್ ಕ್ಷೇಮಾಭಿವೃದ್ಧ ಸಂಘ.
9. ಶ್ರೀ ಮುತ್ತಪ್ಪ, ಬಿ.ಇ.ಎಲ್. ಬಡಾವಣೇ ನಾಗರೀಕ ಕ್ಷೇಮಾಭಿವೃದ್ಧಿ ಸಂಘ.
10. ಶ್ರೀ ರಾಮಸ್ವಾಮಿ ಮತ್ತು ಸತೀಶ್, ಎನ್.ಜಿ.ಓ.
11. ಶ್ರೀ ಮೋಹನ್, ನೋಡಲ್ ಅಧಿಕಾರಿಗಳು (ಹೋ-ಐಸೋಲೇಷನ್)ಮತ್ತು (ಕಾಂಟ್ಯಾಕ್ಟ್ ಟ್ರೇಸಿಂಗ್)

ಶ್ರೀ ಹನುಮಂತರಾಜು, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ವಾರ್ಡ್ ಕಮಿಟಿ ಸದಸ್ಯರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

-ಪು.ತಿ.ನೋ-

Scanned with CamScanner

ಶ್ರೀ ಎಸ್.ಆರ್.ಪ್ರಕಾಶ್, ಕಂದಾಯ ಅಧಿಕಾರಿಗಳು, ದಾಸರಹಳ್ಳಿ ವಲಯ ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.72ರ ಕಮಿಟಿ ರವರು ಮಾತನಾಡುತ್ತಾ, ಉಲ್ಲೇಖ(2)ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.72ರಲ್ಲಿ "Ward Decentralized Triage and Emergency Response (DETER)" Committee for Covid-19 Management (WDC)ಯ ಸಮಿತಿ ರಚನೆ " ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಿಡಲು ಹಾಜರಿದ್ದ ಎಲ್ಲಾ ಬಿಬಿಎಂಪಿ ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.

2. ಕೋವಿಡ್-19 ನಿಯಂತ್ರಣ ಸಂಬಂಧ "(DETER)" ಸಮಿತಿ ರಚನೆ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

   1. "Physical Triaging" ಹಾಗೂ ವಾರ್ಡ್ ವಾರ್‌ರೂಂ ಸ್ಥಾಪನೆಗಾಗಿ ಸೂಕ್ತ ಕಟ್ಟಡ ಸ್ಥಳಾವಕಾಶ ಗುರುತಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಯೋಗಭವನ, ಬಿ.ಇ.ಎಲ್. ಬಾಡಾವಣೆ, 1ನೇಹಂತ, ಭಾರತ್ ನಗರ, ಬೆಂಗಳೂರು-560091. ಇಲ್ಲಿ ಅಗತ್ಯ ಕೇಂದ್ರ ಸ್ಥಾಪಿಸುವ ಬಗ್ಗೆ ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆಯಲು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

   2. ಅಗತ್ಯವಿರುವ ಬ್ಯಾನರ್, ಪೋಸ್ಟರ್, ನಾಮಫಲಕ, ಸೂಚನಾಫಲಕ ಹಾಗೂ ಅಗತ್ಯ ಪ್ರಮುಖ ಸಾಮಾಗ್ರಿಗಳನ್ನು ಏರ್ಪಾಡು ಮಾಡಿಕೊಳ್ಳಲು ಕ್ರಮವಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

   3. ವಾರ್ಡ್‌ನ ವಾರ್‌ರೂಂಗೆ ಪ್ರತ್ಯೇಕ ಅಗತ್ಯವಿರುವ ಟೆಲಿಫೋನ್, ಕಾಲ್‌ಸೆಂಟರ್ ಸೌಲಭ್ಯ ಒದಗಿಸಲು ವಲಯ ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ಕಛೇರಿಗೆ ಕೋರುವಂತೆ ವಾರ್ಡ್ ಕಾರ್ಯದರ್ಶಿಯವರಿಗೆ ಸಭೆಯಲ್ಲಿ ತಿಳಿಸಿ, ದೂರವಾಣಿ ಸಂಖ್ಯೆ ದೊರೆತ ಕೂಡಲೇ ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

-ಮು.ತಿ.ನೋ-

Scanned with CamScanner

4. ವಾರ್ಡ್‌ವಾರು ಸ್ವಯಂ ಸೇವಕವರನ್ನು ನಿಯಮಾನುಸಾರ ನೊಂದಾಯಿಸಿಕೊಳ್ಳುವುದು, ವಾರ್ಡಿನಲ್ಲಿ, ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿಯವರನ್ನು ಗುರುತಿಸಿ, ಅಗತ್ಯ ವಿವರ ಸಂಗ್ರಹಣೆ ಹಾಗೂ RWAಗಳನ್ನು ಸೇರಿಸಿಕೊಂಡು ಸರ್ಕಾರಿ ಆದೇಶದ ಪ್ರಕಾರ ಕಾರ್ಯವಾರು ಗುಂಪು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5. ವಾರ್ಡ್‌ಮಟ್ಟದ ಇಲಾಖಾ ಅಧಿಕಾರಿಗಳ ಕೋರ್‌ಗ್ರೂಪ್, NGO ಹಾಗೂ ಸ್ವಯಂ ಸೇವಕರ ಗ್ರೂಪ್ ಮತ್ತು ಆಸ್ಪತ್ರೆ/ ಹೋಂ ಐಸೋಲೇಷನ್ ಗಮನಿಸುವಿಕೆ, ವೈದ್ಯಕೀಯ/ BLO ಸಿಬ್ಬಂದಿಗಳ ವಾಟ್ಸ್‌ಆಪ್ ಗ್ರೂಪ್‌ಗಳನ್ನು ರಚಿಸಿ ಸಕ್ರಿಯಗೊಳಿಸಿಕೊಳ್ಳಲು ತೀರ್ಮಾನಿಸಲಾಯಿತು.

6. ಬಿಬಿಎಂಪಿ ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗ ಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮವಿಡಲು ತೀರ್ಮಾನಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಚಿತ್ತಯ್ಯ)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.72, ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಎಸ್.ಆರ್.ಪ್ರಕಾಶ್) 18/5/2021
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಹೇರೋಹಳ್ಳಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು :</u>

1. ಮಾನ್ಯ ವಲಯ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
4. ಮಾನ್ಯ ಉಪ ಆಯುಕ್ತರು ರಾಜರಾಜೇಶ್ವರಿ ನಗರ ವಲಯ ರವರ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೇರೋಹಳ್ಳಿ ಉಪ ವಿಭಾಗ), ಬಿಬಿಎಂಪಿ, ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಂದಾಯ ಅಧಿಕಾರಿ, ಹೇರೋಹಳ್ಳಿ ಉಪ ವಿಭಾಗರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಅಭಿಯಂತರರು (ವಾರ್ಡ್ ನಂ.72, ಹೇರೋಹಳ್ಳಿ) ಮತ್ತು ವಾರ್ಡ್ ಕಮಿಟಿ ಕಾರ್ಯದರ್ಶಿಗಳು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.
8. ಕಛೇರಿ ಕಡತಕ್ಕೆ.

Scanned with CamScanner